# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 108 |
| ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 14.02.2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ ವಿವರ | ಉತ್ತರ |
|---|---|---|
| ಅ) | ಮೋಜಿಣಿ ಇಲಾಖೆಯಡಿ ಪೋಡಿ ಹದ್ದುಬಸ್ತು ಇ-ಸ್ವತ್ತು ಸ್ಕೆಚ್ ಮುಂತಾದ ಅರ್ಜಿಗಳು ವರ್ಷಗಟ್ಟಲೇ ವಿಲೇವಾರಿಯಾಗದೇ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ಈ ವಿಳಂಬಕ್ಕೆ ಕಾರಣವಾದ ಸಿಬ್ಬಂದಿ ಕೊರತೆ ಮತ್ತು ತಾಂತ್ರಿಕ ದೋಷದಂತಹ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಮಾಹಿತಿ ನೀಡುವುದು) | 1) 2021ನೇ ಸಾಲಿನಲ್ಲಿ **1514** ಮತ್ತು 2022ನೇ ಸಾಲಿನಲ್ಲಿ **1519** ಪರವಾನಗಿ ಭೂಮಾಪಕರುಗಳನ್ನು ನೇಮಕಾತಿ ಮಾಡಿಕೊಂಡಿದ್ದು, 2023ನೇ ಸಾಲಿನಲ್ಲಿ 2000 ಪರವಾನಗಿ ಭೂಮಾಪರುಗಳ ನೇಮಕಾತಿ ಕುರಿತು ಅರ್ಜಿ ಆಹ್ವಾನಿಸಿ ಅರ್ಹ 1405 ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡು ವೃತ್ತಿ ಬುನಾದಿ ತರಬೇತಿ ನೀಡಿ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದ **991** ಜನ ಅಭ್ಯರ್ಥಿಗಳಿಗೆ ದಿನಾಂಕ:6-2-2024 ಮತ್ತು 7-2-2024 ರಂದು ಕೌನ್ಸಲಿಂಗ್ ಮೂಲಕ ವಿವಿಧ ತಾಲ್ಲೂಕುಗಳಿಗೆ ನಿಯೋಜಿಸಲಾಗಿದೆ.<br>2) ಭೂಮಾಪನ ಇಲಾಖೆಯಲ್ಲಿ 364 ಸರ್ಕಾರಿ ಭೂಮಾಪಕರ ಹುದ್ದೆ ಭರ್ತಿ ಮಾಡಿಕೊಳ್ಳುವ ಕುರಿತು ಅಗತ್ಯ ಕ್ರಮ ಕೈಗೊಳ್ಳಲು ಕೆ.ಪಿ.ಎಸ್.ಸಿ ಗೆ ವಹಿಸಲಾಗಿದೆ<br>3) ಕಡಿಮೆ ಪ್ರಕರಣಗಳು ಬಾಕಿಯಿರುವ ತಾಲ್ಲೂಕುಗಳಿಂದ ಹೆಚ್ಚಿನ ಪ್ರಕರಣಗಳು ಬಾಕಿಯಿರುವ ತಾಲ್ಲೂಕಿಗೆ ಭೂಮಾಪಕರುಗಳನ್ನು ನಿಯೋಜಿಸಿ ಶೀಘ್ರ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br>4) ತಾಂತ್ರಿಕ ಸಮಸ್ಯೆ ಪರಿಹರಿಸುವ ಕುರಿತು ಕೇಂದ್ರ ಕಛೇರಿಯ ಪಿ.ಎಂ.ಯು ಘಟಕದಲ್ಲಿ ಪ್ರತ್ಯೇಕ ತಂಡವನ್ನು ನೇಮಿಸಲಾಗಿದ್ದು, ತಾಂತ್ರಿಕ ಸಮಸ್ಯೆಗಳ ಬಗ್ಗೆ ಮನವಿಗಳು ಸ್ವೀಕೃತಿಯಾದಲ್ಲಿ ಕೂಡಲೇ ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಉಪನೋಂದಣಿ ಕಛೇರಿಗಳ ಮೇಲೆ ತುಂಬಾ ಒತ್ತಡಗಳಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನೂತನವಾಗಿ ರಚನೆಯಾಗಿರುವ ಎಲ್ಲಾ ಹೊಸ | -: ಬಂದಿದೆ:-<br>ಪ್ರಸ್ತುತ ನೂತನ ಜನಸ್ನೇಹಿ ಕಾವೇರಿ-2.0 ತಂತ್ರಾಂಶವನ್ನು ಅಭಿವೃದ್ದಿಪಡಿಸಿ ರಾಜ್ಯದ ಎಲ್ಲಾ ಉಪ ನೋಂದಣಿ ಕಛೇರಿಗಳಲ್ಲಿ ಅಳವಡಿಸಿ ಜಾರಿಗೆ ತರಲಾಗಿದೆ. ಕಾವೇರಿ-2.0 ತಂತ್ರಾಂಶದಲ್ಲಿ ಸಾರ್ವಜನಿಕರೇ ನೋಂದಾಯಿಸಿರುವ ದಸ್ತಾವೇಜಿಗೆ ಸಂಬಂಧಿಸಿದಂತೆ ಡೇಟಾವನ್ನು ನಮೂದಿಸಿ ನೋಂದಣಿಯ ಶುಲ್ಕವನ್ನು |

| | | |
|---|---|---|
| | ತಾಲ್ಲೂಕುಗಳಲ್ಲಿಉಪನೋಂದಣಾಧಿಕಾರಿ ಕಛೇರಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; (ಮಾಹಿತಿ ನೀಡುವುದು) | ಪರಿಶೀಲಿಸಿ ನಿಗದಿಪಡಿಸಿಕೊಳ್ಳಬಹುದಾಗಿದ್ದು, ಆನ್‌ಲೈನ್ ಮೂಲಕ ನೋಂದಣಿ ಸೇವೆಯನ್ನು ಸಾರ್ವಜನಿಕರು ಪಡೆದುಕೊಳ್ಳುತ್ತಿರುತ್ತಾರೆ. ಇದರಿಂದ ಉಪ ನೋಂದಣಿ ಕಛೇರಿಯಲ್ಲಿ ದಸ್ತಾವೇಜಿನ ಡೇಟಾ ನಮೂದಿಸುವುದು ಇರುವುದಿಲ್ಲ.<br><br>ನೂತನವಾಗಿ ರಚನೆಯಾಗಿರುವ ತಾಲ್ಲೂಕುಗಳ ಪೈಕಿ ಕಾಗವಾಡ, ಕುಕನೂರು, ಕನಕಗಿರಿ, ಸಿರಿವಾರ, ಕಾಪು, ಬಬಲೇಶ್ವರ, ತಿಕೋಟಾ ಮತ್ತು ತಾಳಿಕೋಟೆ ತಾಲ್ಲೂಕುಗಳಲ್ಲಿ ಉಪ ನೋಂದಣಿ ಕಛೇರಿಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.<br><br>ಕಾಗವಾಡ ಉಪ ನೋಂದಣಿ ಕಛೇರಿ ವ್ಯಾಪ್ತಿಗೆ ಕಂದಾಯ ಗ್ರಾಮಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ.<br><br>ಸಿರಿವಾರ, ಕನಕಗಿರಿ, ಕುಕನೂರು, ಬಬಲೇಶ್ವರ, ತಿಕೋಟಾ, ತಾಳಿಕೋಟೆ ಮತ್ತು ಕಾಪು ಉಪ ನೋಂದಣಿ ಕಛೇರಿಗಳಿಗೆ ಗ್ರಾಮಗಳನ್ನು ನಿಗದಿಗೊಳಿಸಲು ಪರಿಶೀಲಿಸಲಾಗುತ್ತಿದೆ. |
| ಈ) | ರಾಜ್ಯದಲ್ಲಿರುವ ಪರವಾನಗಿ ಭೂಮಾಪಕರ ಸಂಖ್ಯೆ ಎಷ್ಟು; ಈ ಭೂಮಾಪಕರ ನೇಮಕಕ್ಕೆ ಇರುವ ವಿದ್ಯಾರ್ಹತೆ ಅಥವಾ ಮಾನದಂಡವೇನು; ಮತ್ತು ಅವರಿಗೆ ನೀಡಲಾಗುವ ಮಾಸಿಕ ವೇತನ ಎಷ್ಟು; ಹಾಗೂ ಈ ಭೂಮಾಪಕರನ್ನು ಖಾಯಂ ಮಾಡುವ ಕುರಿತು ಸರ್ಕಾರದ ಹಂತದಲ್ಲಿ ಚಿಂತನೆ ನಡೆದಿದೆಯೇ? (ಮಾಹಿತಿ ನೀಡುವುದು) | ಪ್ರಸ್ತುತ ಒಟ್ಟು 3394 ಜನ ಪರವಾನಿಗೆ ಭೂಮಾಪಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ.<br>**ಪರವಾನಗಿ ಭೂಮಾಪಕರ ನೇಮಕಾತಿಗೆ ಇರುವ ವಿದ್ಯಾರ್ಹತೆಗಳು-**<br>ಕರ್ನಾಟಕ ಭೂಕಂದಾಯ ನಿಯಮಾವಳಿಗಳು 1966ರ ನಿಯಮ 46 (ಎ) ರಂತೆ<br>1. ಕನಿಷ್ಟ ಪದವಿ ಪೂರ್ವ ಶಿಕ್ಷಣ(ಪಿ.ಯು.ಸಿ.) ಅಥವಾ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ ಜರುಗಿಸುವ 12ನೇ ತರಗತಿ ಸಿ.ಬಿ.ಎ ಸ್.ಇ. ಅಥವಾ ಐ.ಸಿ.ಎಸ್.ಇ. ಇವುಗಳಲ್ಲಿ ವಿಜ್ಞಾನ ವಿಷಯವನ್ನು ಪಡೆದು ಗಣಿತ ವಿಷಯದಲ್ಲಿ 60% ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ಉತ್ತೀರ್ಣ ರಾಗಿರಬೇಕು.<br>2. ಅಥವಾ ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿತವಾದ ಯಾವುದೇ ವಿಶ್ವ ವಿದ್ಯಾಲಯದಲ್ಲಿ ಬಿ.ಇ(ಸಿವಿಲ್)/ ಅಥವಾ ಬಿ.ಟೆಕ್(ಸಿವಿಲ್)/ಅಥವಾ ಸಿವಿಲ್ ಇಂಜಿನೀಯರಿಂಗ್ ಡಿಪ್ಲೋಮಾದಲ್ಲಿ ಉತ್ತೀರ್ಣರಾಗಿರಬೇಕು.<br>3. ಕರ್ನಾಟಕ ರಾಜ್ಯ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ "ಲ್ಯಾಂಡ್ ಅಂಡ್ ಸಿಟಿ ಸರ್ವೆ" ಯಲ್ಲಿ ಪದವಿ ಪೂರ್ವ ಡಿಪ್ಲೋಮಾ ದಲ್ಲಿಉತ್ತೀರ್ಣರಾಗಿರಬೇಕು.<br>4. ಅಥವಾ ಕರ್ನಾಟಕ ಸರ್ಕಾರದ ಉದ್ಯೋಗ ಹಾಗೂ ತರಬೇತಿ ಇಲಾಖೆ ನಡೆಸುವ ಐ.ಟಿ.ಐ. ಇನ್ ಸರ್ವೆ ಟ್ರೇಡ್‌ನಲ್ಲಿ ಉತ್ತೀರ್ಣರಾಗಿರಬೇಕು.<br>5. ಅಥವಾ ರಾಜ್ಯ ಸರ್ಕಾರದ ಭೂಮಾಪನ ಕಂದಾಯ ವ್ಯವಸ್ಥೆ & ಭೂದಾಖಲೆಗಳ ಇಲಾಖೆಯಲ್ಲಿ ಅಥವಾ ಸರ್ವೆ ಆಫ್ ಇಂಡಿಯಾ ಅಥವಾ ಸರ್ಕಾರಿ ವಲಯಕ್ಕೆ ಒಳಪಟ್ಟ ಸಂಸ್ಥೆಗಳಲ್ಲಿಅಥವಾ ಖಾಸಗಿ ಸಂಸ್ಥೆಗಳಲ್ಲಿ |

| | | |
|---|---|---|
| | | ಕನಿಷ್ಠ 10 ವರ್ಷಗಳ ಭೂಮಾಪನ ಸೇವೆ ಸಲ್ಲಿಸಿ ನಿವೃತ್ತ ರಾಗಿರುವವರು.<br>**ಪರವಾನಗಿ ಭೂಮಾಪಕರ ವೇತನ** :-<br>ಪರವಾನಗಿ ಭೂಮಾಪಕರು ಪೂರ್ಣ ಪ್ರಮಾಣದಲ್ಲಿ ಅಪ್‌ಲೋಡ್ ಮಾಡಿ ಇತ್ಯರ್ಥವಾದ ಪ್ರತಿ ಅರ್ಜಿಗೆ ಎರಡು ಬ್ಲಾಕ್‌ವರೆಗೆ ರೂ.1200/- ಮತ್ತು ಎರಡಕ್ಕಿಂತ ಹೆಚ್ಚಿನ ಬಹುಮಾಲೀಕತ್ವದ ಹಿಸ್ಸಾ ಬ್ಲಾಕ್ ವಿಂಗಡಿಸಿರುವ ಪ್ರತಿ ಹೆಚ್ಚುವರಿ ಬ್ಲಾಕ್‌ಗೆ ರೂ.**200**/-ರಂತೆ **ದಿನಾಂಕ:15-01-2022** ರಿಂದ ಅನ್ವಯವಾಗುವಂತೆ ಪರವಾನಗಿ ಭೂಮಾಕರುಗಳಿಗೆ ಸೇವಾ ಶುಲ್ಕವನ್ನು ನಿಗಧಿ ಪಡಿಸಲಾಗಿದೆ.<br><br>**ಪರವಾನಗಿ ಭೂಮಾಪಕರನ್ನು ಖಾಯಂ ಮಾಡುವ ಕುರಿತು**:-<br>ಪರವಾನಗಿ ಭೂಮಾಪಕರುಗಳು ತಮ್ಮನ್ನು ಖಾಯಂ ಗೊಳಿಸುವ ಕುರಿತು ಮನವಿ ಸಲ್ಲಿಸಿದಂತೆ ಪರಿಶೀಲಿಸಿ, ಪರವಾನಗಿ ಭೂಮಾಪಕರನ್ನು ಯಾವುದೇ ಖಾಲಿ ಹುದ್ದೆಗೆ ನೇಮಕ ಮಾಡಿಕೊಂಡಿರುವುದಿಲ್ಲ. ಸಂಚಿತ ನಿಧಿಯಿಂದಾಗಲಿ, ಸರ್ಕಾರದ ಅನುದಾನದಿಂದಾಗಲಿ ಇವರಿಗೆ ವೇತನ ಪಾವತಿಸಿರುವುದಿಲ್ಲ. ಅರ್ಜಿದಾರರಿಂದ ಸ್ವೀಕೃತವಾಗುವ ಶುಲ್ಕದಲ್ಲಿ ಕಾಲಕಾಲಕ್ಕೆ ನಿಗಧಿಪಡಿಸಿದ ಮೊತ್ತವನ್ನು ಪಾವತಿಸಲಾಗುತ್ತಿದೆ. ಪರವಾನಗಿ ನೀಡುವಾಗ ಇದು ಯಾವುದೇ ಸರ್ಕಾರಿ ಸೇವೆಗೆ ಪೂರಕವಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಅಲ್ಲದೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀಮತಿ ಉಮಾದೇವಿ ಪ್ರಕರಣದನ್ವಯ ಪರವಾನಗಿ ಭೂಮಾಪಕರನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ. |

**ಸಂಖ್ಯೆ: ಕಂಇ 19 ಎಸ್‌ಎಸ್‌ಸಿ 2024.**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು